(ಇಂದು ದಿನಾಂಕ 06-09-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು – ಪ್ರತಿವಾದಿಯರ ಪರ ಶ್ರೀ ಎನ್.ಕೆ.ಎಸ್. ವಕೀಲರಿಂದ–**

1. ದಿನಾಂಕ 28-05-1998 ರಲ್ಲಿ ನನ್ನ ಮತ್ತು ನನ್ನ ತಂದೆಯ ಸಹೋದರರ ನಡುವೆ ವಾಂಟಣಿ ದಸ್ತಾವೇಜು ಆಗಿತ್ತು ಎಂದರೆ ಸರಿ . ಸದ್ರಿ ದಸ್ತಾವೇಜು ಪ್ರಕಾರ ನಾವು ನಮ್ಮ ಕುಟುಂಬದ ಆಸ್ತಿಗಳನ್ನು ವಾಂಟಣಿ ಮಾಡಿಕೊಂಡಿರುತ್ತೇವೆ. ಸದ್ರಿ ಸಮಯ ಕಣ್ಣಳತೆಯಲ್ಲಿ ಗಡಿಯನ್ನು ಗುರುತಿಸಿ ದಸ್ತಾವೇಜು ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ . ಸದ್ರಿ ದಸ್ತಾವೇಜು ನನ್ನ ಬಳಿ ಇದೆ. ಅದನ್ನು ನ್ಯಾ.ಕ್ಕೆ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ. ಸದ್ರಿ ದಸ್ತಾವೇಜಿನಲ್ಲಿ ಯಾರಿಗೆ ಯಾವ ಆಸ್ತಿ ವಿಂಗಡಿಸಲಾಗಿದೆ ಎಂದು ನನಗೆ ಹೇಳಬಹುದು. ಸದ್ರಿ ದಸ್ತಾವೇಜಿನ ದೃಢೀಕೃತ ಪ್ರತಿಯ ನಕಲನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನನಗೆ ದಾಖಲೆ ನೋಡಿ ಹೇಳಲು ಬರುವುದಿಲ್ಲ ಎನ್ನುತ್ತಾರೆ.

2. ಸದ್ರಿ ವಾಂಟಣಿ ದಸ್ತಾವೇಜಿನ ಅಸಲು ಪ್ರತಿ ನನ್ನ ಬಳಿ ಇಲ್ಲ, ನಕಲು ಪ್ರತಿ ಮಾತ್ರ ನನ್ನ ಬಳಿ ಇದೆ. ಅದರ ಅಸಲು ಪ್ರತಿ ನನ್ನ ಚಿಕ್ಕಪ್ಪಂದಿರ ಬಳಿ ಇರಬಹುದು . ನನ್ನ ಬಳಿ ಸದ್ರಿ ದಸ್ತಾವೇಜಿನ ದೃಢೀಕೃತ ನಕಲು ಇರುತ್ತದೆ. ವಾದ ಪತ್ರದ ಜೊತೆ ವಾದಿಯರು ಸದ್ರಿ ವಾಂಟಣಿ ದಸ್ತಾವೇಜಿನ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ವಾದಿ ಪರ ವಕೀಲರು ಸದ್ರಿ ದಾಖಲಾತಿಯನ್ನು ಪ್ರತಿವಾದಿಯರ ಪರ ಗುರುತಿಸಿಕೊಳ್ಳಲು ತಕರಾರು ಇಲ್ಲ ಎಂದು ಹೇಳಿದ ಕಾರಣ ವಾಂಟಣಿ ದಸ್ತಾವೇಜು ದಿನಾಂಕ 28-05-1998 ರ ನಕಲು ಪ್ರತಿಯನ್ನು ಈಗ ನಿ.ಡಿ. 1 ಎಂದು ಗುರುತಿಸಲಾಯಿತು. ನಿ.ಡಿ.1 ರ ಸಂಗಡ ಯಾವುದೇ ನಕಾಶೆ ಇರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು

ನಿ.ಡಿ.1 ರ ನಂತರ ಮೋಜಣಿ ನಡೆಸಿ ನಕಾಶೆ ತಯಾರಿಸಲಾಗಿದೆ ಎನ್ನುತ್ತಾರೆ. ನಿ.ಡಿ. 1 ರಲ್ಲಿ ನಮೂದಿಸಿದ ಹಿಸ್ಸಾ ವಿಂಗಡಣೆ ಸರಿಯಾಗಿದೆ.

**3.** ಸ.ನಂ. 638 ಹಿಸ್ಸಾ 2 ರಲ್ಲಿ ನನ್ನ ಪಾಲಿಗೆ 0–8–0 ಕ್ಷೇತ್ರ ವಿಂಗಡಣೆಯಾಗಿರುತ್ತದೆ. ಸ.ನಂ. 638 ಹಿಸ್ಸಾ 2 ಒಟ್ಟೂ 0–25–0 ಕ್ಷೇತ್ರ ಇರುತ್ತದೆ. ಅದರಲ್ಲಿ ಉಳಿದ 0–8–0 ಕ್ಷೇತ್ರವನ್ನು ನನ್ನ ದೊಡ್ಡಪ್ಪ ಜನಾರ್ಧನ ಶೇಟ್ ಮತ್ತು 0–9–0 ಕ್ಷೇತ್ರವನ್ನು ನನ್ನ ಚಿಕ್ಕಪ್ಪ ಗಜಾನನ ಶೇಟ್ ಇವರಿಗೆ ವಿಂಗಡಿಸಲಾಗಿದೆ. ನಿ.ಡಿ. 1 ರಲ್ಲಿ ಗಡಿಯನ್ನು ಗುರುತಿಸಿಲ್ಲ. ನಿ.ಡಿ.1 ರ ನಂತರ ಸಪ್ಟೆಂಬರ್ 1998 ರಲ್ಲಿ ಮೋಜಣಿ ಮಾಡಿಸಿರುತ್ತೇವೆ. ನನ್ನ ದೊಡ್ಡಪ್ಪ, ಚಿಕ್ಕಪ್ಪ ಹಾಗೂ ನನ್ನ ತಾಯಿ ಕೂಡಿಕೊಂಡು ಮೋಜಣಿಗೆ ಅರ್ಜಿ ಸಲ್ಲಿಸಿದ್ದರು.

**4**. ಸ.ನಂ. 636/3 ಪ್ರತಿವಾದಿಯರ ಹಕ್ಕು ಕಬಜೆಯ ಸ್ಥಳ ಎಂದರೆ ಸರಿ. ಅವರ ಸ್ಥಳದಲ್ಲಿ ಭಾಗಾಯತ ಇದೆ. ತರಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಸ್ಥಳದಲ್ಲಿ ಪ್ರತಿವಾದಿಯರ ವಾಸ್ತವ್ಯದ ಮನೆ ಮತ್ತು ಉಪಗೃಹಗಳು ಇವೆ ಎಂದರೆ ಇರಬಹುದು . ನನ್ನ ಚಿಕ್ಕಪ್ಪ ಗಜಾನನ ಶೇಟ್ ಇವರಿಗೆ ವಿಂಗಡಿಸಿದ 0–9–0 ಕ್ಷೇತ್ರದ ಉತ್ತರ ದಿಕ್ಕಿಗೆ ಪ್ರತಿವಾದಿಯರ ಸ.ನಂ. 636/3 ಬರುತ್ತದೆ ಎಂದರೆ ಸರಿ. ನನ್ನ ಚಿಕ್ಕಪ್ಪನಿಗೆ ವಿಂಗಡಿಸಿದ ಕ್ಷೇತ್ರದ ಪೂರ್ವ ದಿಕ್ಕಿಗೆ ನಮಗೆ ಸೇರಿದ ದಾವಾ ಆಸ್ತಿ ಸ.ನಂ. 638 ಅ/2 ಬ ಬರುತ್ತದೆ ಎಂದರೆ ಸರಿ.

**5.** ಸ.ನಂ. 636/4 ನಮ್ಮ ಕುಟುಂಬದ ಆಸ್ತಿ ಎನ್ನುವ ಬಗ್ಗೆ ನನಗೆ ಸರಿಯಾಗಿ ಹೇಳಲು ಬರುವುದಿಲ್ಲ. ಸ.ನಂ. 636 ನಮ್ಮ ಕುಟುಂಬದ ಆಸ್ತಿ ಇರುತ್ತದೆ. ನಿ.ಡಿ.1 ರಲ್ಲಿ ಸ.ನಂ. 636/4 ಕ್ಷೇತ್ರ 0–12–0 ಇದರಲ್ಲಿ ನನ್ನ ಚಿಕ್ಕಪ್ಪನಿಗೆ, ದೊಡ್ಡಪ್ಪನಿಗೆ ಮತ್ತು ನಮ್ಮ ಪಾಲಿಗೆ ತಲಾ 0–4–0 ಕ್ಷೇತ್ರ ವಿಂಗಡಿಸಲಾಗಿದೆ ಎಂದರೆ ಸರಿ . ನಮಗೆ ಸದ್ರಿ ಆಸ್ತಿಯಲ್ಲಿ ಮಧ್ಯದ ಭಾಗವನ್ನು ವಿಂಗಡಿಸಲಾಗಿದೆ. ನನ್ನ ಚಿಕ್ಕಪ್ಪ ಗಜಾನನ ಶೇಟ್ ಇವರಿಗೆ ಬಲಭಾಗದ ಅಂದರೆ ಪೂರ್ವ ಭಾಗದ ಆಸ್ತಿಯನ್ನು ವಿಂಗಡಿಸಲಾಗಿದೆ. ದೊಡ್ಡಪ್ಪನಿಗೆ ಪಶ್ಚಿಮ ಭಾಗದ ಆಸ್ತಿಯನ್ನು ವಿಂಗಡಿಸಲಾಗಿದೆ.

**6.** ಸ.ನಂ. 638/2 ರ ದಕ್ಷಿಣ ದಿಕ್ಕಿನಲ್ಲಿ ಪಂಚಾಯತ ರಸ್ತೆ ಇದೆ ಎಂದರೆ ಸರಿ. ಸದ್ರಿ ರಸ್ತೆ 5 ಮೀಟರ ಅಗಲ ಇದೆ ಎಂದರೆ ಇರಬಹುದು. ಸದ್ರಿ ರಸ್ತೆ ಮುಂದುವರಿದು ರಾಷ್ಟ್ರೀಯ ಹೆದ್ದಾರಿಯನ್ನು ಸೇರುತ್ತದೆ ಎಂದರೆ ಸರಿ . ಆದರೆ ನಾನು ಹೋಗಿರುವುದಿಲ್ಲ . ನಮ್ಮ ಕುಟುಂಬದವರು ಪಂಚಾಯತ ರಸ್ತೆಯಿಂದ ಸ.ನಂ. 636/4 ರ ಸ್ಥಳಕ್ಕೆ ಹೋಗಲು ಸ.ನಂ. 638/2 ರ ಮೂಲಕ ಹೋಗುತ್ತಿದ್ದರು ಎಂದರೆ ಸಾಕ್ಷಿ ನಮ್ಮ ಕುಟುಂಬಸ್ಥರಿಗೆ ಮಾತ್ರ ನಮ್ಮ ಮನೆಯ ಮುಂಭಾಗದ ಸ್ಥಳದಲ್ಲಿ ಹೋಗಬಹುದು ಎನ್ನುತ್ತಾರೆ. ನಮ್ಮ ಮನೆ ಸ.ನಂ. 636 ಅಥವಾ 638 ರಲ್ಲಿ ಇದೆ. ನನಗೆ ಸರಿಯಾಗಿ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ಸ.ನಂ. 638 ಅ/2 ರಲ್ಲಿ ಸ.ನಂ. 636/4 ಕ್ಕೆ ಹೋಗಲು ದಾರಿ ಇದೆ ಎಂದರೆ ಸರಿಯಲ್ಲ . ಸಾಕ್ಷಿ ಸ.ನಂ. 638 ಅ/2 ಹಾಗೂ ಸ.ನಂ. 636/4 ರ ನಡುವೆ ನಾವು ಗಡಿ ಪಾಗಾರ ನಿರ್ಮಿಸಿಲ್ಲ ಎನ್ನುತ್ತಾರೆ. ನಾವು ನಿ.ಡಿ. 1 ವಾಂಟಣಿ ದಸ್ತಾವೇಜು ಪ್ರಕಾರ ಗಡಿ ಗುರುತಿಸಿಕೊಂಡಿದ್ದೇವೆ, ಆದರೆ ಪಾಗಾರ ಹಾಕಿಕೊಂಡಿಲ್ಲ. ನಮ್ಮ ಮನೆಯ ಮುಂಭಾಗದಲ್ಲಿ ಹಾಯ್ದಾಡುವ ದಾರಿ ಇರುವ ಬಗ್ಗೆ ಸರ್ವೆ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸರ್ವೆ ನಕಾಶೆಯಲ್ಲಿ ಕಾಣಿಸಿದ್ದಾರೆ ಎನ್ನುತ್ತಾರೆ. ಸದ್ರಿ ನಕಾಶೆಯನ್ನು ಹಾಜರಪಡಿಸಿದ್ದೇನೆ.

**7.** ಪ್ರತಿವಾದಿಯರ ಹಕ್ಕಿನ ಸ.ನಂ. 636/3 ರಿಂದ ಪಂಚಾಯತ ರಸ್ತೆಗೆ ಹೋಗಲು ಪ್ರತಿವಾದಿಯರು ಕೂಡ ಎದುರು ಮಾಗಣೆಯಲ್ಲಿ ನಮೂದಿಸಿದಂತಹ ದಾರಿಯನ್ನು ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಬೇರೆ ದಾರಿ ಇದೆ ಎನ್ನುತ್ತಾರೆ. ಪ್ರತಿವಾದಿಯರು ದೇವರ್ಸು ನಾಯಕ ದೇವಸ್ಥಾನದ ಮೂಲಕ ರಾಷ್ಟ್ರೀಯ ಹೆದ್ದಾರಿಗೆ ಹೋಗುತ್ತಾರೆ ಎನ್ನುತ್ತಾರೆ. ಸದ್ರಿ ದೇವಸ್ಥಾನ ಯಾವ ಸರ್ವೆ ನಂಬರದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರ ಸ.ನಂ. 636/3 ರಿಂದ ಸದ್ರಿ ದೇವಸ್ಥಾನ ಅಂದಾಜು

150 ಮೀಟರ ದೂರ ಇರಬಹುದು. ಸದ್ರಿ 150 ಮೀಟರ ದೂರದ ಆಸ್ತಿ ಪ್ರತಿವಾದಿಯರ ಕುಟುಂಬಕ್ಕೆ ಸೇರಿದ್ದು ಇರುತ್ತದೆ.

8. ಪ್ರತಿವಾದಿಯರು ಸಲ್ಲಿಸಿದ ಎದುರು ಮಾಗಣೆ ಬಗ್ಗೆ ನನಗೆ ಮಾಹಿತಿ ಇದೆ. ಅದಕ್ಕೆ ನಮ್ಮ ವಕೀಲರು ಉತ್ತರ ನೀಡಿರುತ್ತಾರೆ. ಅದನ್ನು ಓದಿದ್ದೀರಾ ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ಪರಿಶೀಲಿಸಿದ್ದೇನೆ, ಯಾವ ದಾಖಲೆ ಎಂದು ಈಗ ಹೇಳಲು ಬರುವುದಿಲ್ಲ ಎನ್ನುತ್ತಾರೆ . ಪ್ರತಿವಾದಿಯರಿಗೆ ಸ.ನಂ. 636/3 ಕ್ಕೆ ಹೋಗಲು ಇನ್ನೊಂದು ದಾರಿ ಇದೆ ಎನ್ನುವ ಬಗ್ಗೆ ಸದ್ರಿ ಉತ್ತರದಲ್ಲಿ ನಮೂದು ಮಾಡಿರುತ್ತೇವೆ . ಪ್ರತಿವಾದಿಯರಿಗೆ ಪಂಚಾಯತಿ ರಸ್ತೆಯನ್ನು ಸೇರಸಲು ಎದುರು ಮಾಗಣೆಯಲ್ಲಿ ಕಾಣಿಸಿದ ರಸ್ತೆ ಮಾತ್ರ ಲಭ್ಯವಿರುತ್ತದೆ ಎಂದರೆ ಸರಿಯಲ್ಲ.

9. ಪ್ರತಿವಾದಿಯರು ನನ್ನ ಚಿಕ್ಕಪ್ಪ ಗಜಾನನ ಶೇಟ್ ಇವರಿಂದ ಸ .ನಂ. 638 ಅ/2 ಅ ಇದರಲ್ಲಿ ಪೂರ್ವ ದಿಕ್ಕಿನ 0-1-8 ಕ್ಷೇತ್ರವನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ . ಪ್ರತಿವಾದಿಯರಿಗೆ ವಾಹನದ ಮೂಲಕ ಪಂಚಾಯತ ರಸ್ತೆ ಸೇರಲು ಅನುಕೂಲವಾಗಲು ಸದ್ರಿ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಇರಬಹುದು. ನನ್ನ ಚಿಕ್ಕಪ್ಪ ಗಜಾನನ ಶೇಟ್ ಈಗಲೂ ಕೂಡ ಅಳ್ವೆಕೋಡಿಯಲ್ಲಿ ವಾಸವಿರುತ್ತಾರೆ. ಪ್ರತಿವಾದಿಯರು ಖರೀದಿಸಿದ 0-1-8 ಕ್ಷೇತ್ರ ತಗ್ಗಿನ ಮತ್ತು ಮಳೆ ನೀರು ತುಂಬುವ ಸ್ಥಳ ಎಂದರೆ ಸರಿ. ಸದ್ರಿ ಸ್ಥಳಕ್ಕೆ ಪ್ರತಿವಾದಿಯರು ಮಣ್ಣು ಭರಾವು ಮಾಡಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿ ನಾವು ಮಣ್ಣು ಭರಾವು ಮಾಡಿದ್ದೇವೆ ಎನ್ನುತ್ತಾರೆ. ಈ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ . ನನ್ನ ದೊಡ್ಡಪ್ಪನ ಮಕ್ಕಳು ನೋಡಿರುತ್ತಾರೆ. ಸದ್ರಿಯವರು ಉಡುಪಿಯಲ್ಲಿ ವಾಸವಿದ್ದಾರೆ. ಪ್ರತಿವಾದಿಯರು ಖರೀದಿಸಿದ 0-1-8 ಕ್ಷೇತ್ರದ ಪೂರ್ವ ದಿಕ್ಕಿನಲ್ಲಿ ಪಾಗಾರ ಕಟ್ಟಲು ಕಲ್ಲುಗಳನ್ನು ಶೇಖರಿಸಿಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾವು ತೆಗೆದಿಟ್ಟಿದ್ದೆವು ಎನ್ನುತ್ತಾರೆ.

10. ಪ್ರತಿವಾದಿಯರು ಖರೀದಿಸಿದ ಆಸ್ತಿಯ ಪಶ್ಚಿಮ ದಿಕ್ಕಿನ ಉಳಿದ ಜಾಗವನ್ನು ಅರುಣ ಮೇಸ್ತ ಎನ್ನುವವರು ನನ್ನ ಚಿಕ್ಕಪ್ಪನಿಂದ ಖರೀದಿಸಿದ್ದಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

ಸದ್ರಿ ಆಸ್ತಿಗೆ ಈಗ ಸ.ನಂ. 638 ಅ/6 ಎಂದು ನಂಬರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರುಣ ಮೇಸ್ತರವರು ತಮ್ಮ ಗಡಿಗೆ ಪಾಗಾರ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪನ ಆಸ್ತಿಯ ಗಡಿಗೆ ಪಾಗಾರ ಇದೆ ಎನ್ನುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಯರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ